ಗೃಹಿಣೀಧರ್ಮ ನಿಭಾಯಿಸಿಕೊಂಡು ಬರುತ್ತಿರುವ ಮಡದಿ ಅವನಿಗಿದ್ದಾಳೆ. ಮತ್ತದೇ ಸಮರ್ಥನೆಯ ಮರೆಯಲ್ಲಿ ಅವನನ್ನು ಒಪ್ಪಿಟ್ಟುಕೊಳ್ಳುತ್ತಾಳೆ ವೈಷ್ಣವಿ. 'ಪ್ರೀತಿ ಮಾಯೆ ಕಣಾ... ಪ್ರೀತಿ ಕುರುಡು ಕಣಾ...' ಎಲ್ಲಾ ಗೊತ್ತಿದ್ದೂ ದೀಪದ ಕುಡಿಯ ಬೆಳಕಿನ ಆಕರ್ಷಣೆಯಿಂದ ಅದರೆಡೆಯಲ್ಲಿಯೇ ಸುತ್ತು ಹಾಕುತ್ತಿರುವ ಪತಂಗದಂತೆ ತನ್ನ ಮನಸ್ಸನ್ನು ಫಲ್ಗುಣನೆಡೆಗೆ ಹರಿಬಿಟ್ಟಿದ್ದಳು ವೈಷ್ಣವಿ. ಇಂತಾ ಪ್ರಕರಣಗಳು ಇತಿಹಾಸದಲ್ಲಿ ಹೊಸದೇನಲ್ಲ. ವಿಶೇಷವಾದ್ದೂ ಅಲ್ಲ. ಸಿನಿಮಾರಂಗದವರ ಬದುಕಿನಲ್ಲಿ ಇಂತಾ ಮದುವೆಗಳು ಸರ್ವೇಸಾಮಾನ್ಯವಾಗಿದ್ದರೆ ಶ್ರೀಸಾಮಾನ್ಯರ ಬದುಕಿನಲ್ಲೇಕೆ ಅಸಹಜವೆನ್ನಿಸಬೇಕು? ಅಲ್ಲಿ ಹುಟ್ಟುವ ಪ್ರೀತಿ ಇಲ್ಲಿ ಹುಟ್ಟುವ ಪ್ರೀತಿಗಿಂತಾ ಯಾಕೆ ಭಿನ್ನ? ಹೇಳಿದ್ದ ಫಲ್ಗುಣ, "ಅವಳ ಬಗ್ಗೆ ನನ್ನ ತಕರಾರೇನಿಲ್ಲ. ಆದರೆ ನಿಮ್ಮನ್ನ ಬಿಟ್ಟಿರಲು ನನ್ನ ಕೈಲಿ ಸಾಧ್ಯವಿಲ್ಲ. ಡೈವೋರ್ಸ್ ತಗೊಂಡು ಕಾನೂನುಬದ್ಧವಾಗೇ ನಿಮ್ಮನ್ನ ಮದುವೆಯಾಗ್ತೀನಿ."

"ಸುಲಭಕ್ಕೆ ಒಪ್ತಾರಾ ಆಕೆ? ಎಲ್ಲಾ ಮುಗಿಯೋಕೆ ಯಾವ ಕಾಲ ಆಗುತ್ತೋ?"

"ನಿಮಗೆ ಅವಳ ಸ್ವಭಾವ ಗೊತ್ತಿಲ್ಲ ವೈಷ್ಣವಿ. ಅವಳಲ್ಲೊಂದು ಅಹಂಕಾರ ಇದೆ. 'ನಿನಗೆ ನಾನು ಬೇಡ ಅಂದರೆ ನನಗೂ ನೀನು ಬೇಡ' ಅನ್ನುವ ಸ್ವಾಭಿಮಾನ ಇದೆ. ಪರಸ್ಪರ ಒಪ್ಪಿಗೆಯ ಮೇಲೆ ಡೈವೋರ್ಸ್ ಬೇಗ ಸಿಕ್ಕಿಬಿಡುತ್ತೆ ಅನ್ನೋ ನಂಬಿಕೆ ನಂಗಿದೆ."

"ಮಕ್ಕಳು?"

"ಅವರಿಗೆ ಅವರ ಭವಿಷ್ಯ ರೂಪಿಸಿಕೊಟ್ಟಿದ್ದಾಯ್ತಲ್ಲ? ಅವರ ಪಾಡು ಅವರಿಗೆ..."

"ಆದ್ರೂ..."

"ವೈಷ್ಣವೀ, ಅಪಸ್ವರದ ಮಾತಾಡ್ಬೇಡಿ. ನನ್ನ ಹೃದಯವನ್ನ ಮೆಟ್ಟಿ ಮುರೀಬೇಡಿ..." ಮಾತಿನ ಕೊನೆಕೊನೆಯಲ್ಲಿ ಗದ್ಗದವಾಗಿತ್ತು ಫಲ್ಗುಣನ ದನಿ. ಪಾರಿಜಾತದ ಮರದಡಿಯಲ್ಲಿ, ಅರೆಗತ್ತಲಿನ ಮರೆಯಲ್ಲಿ, ಅವಳ ಸುಕೋಮಲ ಕರಗಳನ್ನು ತನ್ನ ಕರಗಳಲ್ಲಿ ಬಂಧಿಸಿಕೊಂಡು, ಆಗಸದಲ್ಲಿ ಥಳಗುಟ್ಟುತ್ತಿರುವ ಸಹಸ್ರ ಸಹಸ್ರ ನಕ್ಷತ್ರಗಳನ್ನು ಸಾಕ್ಷಿಯಾಗಿರಿಸಿಕೊಂಡು, ತನ್ನ ಪ್ರೇಮವನ್ನು ಸಾಬೀತುಗೊಳಿಸುವ ಮಾತಾಡುತ್ತಿದ್ದವನ ಸ್ವರದಲ್ಲಿದ್ದ ಆರ್ದ್ರತೆಗೆ, ಪ್ರಾಮಾಣಿಕತೆಗೆ ಸೋತು ಶರಣಾಗಿಬಿಟ್ಟಿದ್ದಳು ವೈಷ್ಣವಿ.

★★★

ಪ್ರಬುದ್ಧರ ಪ್ರೇಮಪ್ರಕರಣಕ್ಕೆ ಪೂರ್ಣವಿರಾಮ ಬೀಳುವ ಸಮಯ ಸನ್ನಿಹಿತವಾಯ್ತು. ಎರಡು ತಿಂಗಳೆನ್ನುವುದರಲ್ಲಿ ಶುಭಸುದ್ದಿ ಹೊತ್ತು ತಂದ ಫಲ್ಗುಣ. ಸಮಯ ಹೊಂಚಿ ಪ್ರೇಮಿಕೆಯ ಕಿವಿಯಲ್ಲಿ ಉಸುರಿದ, 'ವಿಚ್ಛೇದನಕ್ಕೆ ಒಪ್ಪಿದ್ದಾಳೆ ನನ್ನ ಹೆಂಡತಿ'.

ಢಣ್ಣನೆ ಒಂದು ಎಚ್ಚರಿಕೆಯ ಘಂಟೆ ವೈಷ್ಣವಿಯ ಮೆದುಳಲ್ಲಿ ಮೊಳಗಿತು. ಹೆಚ್ಚೂ ಕಡಿಮೆ ಮೂವತ್ತೈದು ವರ್ಷಗಳ ಸಾಂಸಾರಿಕ ಜೀವನವನ್ನು ತುಂಡುಗಡಿದುಕೊಂಡು ಬರುವುದು ಇಷ್ಟು ಸುಲಭವೇ? ಸಲೀಸೇ? ಫಲ್ಗುಣನ ಮಾತಿನ ಪ್ರಕಾರ ಅವನ ಹೆಂಡತಿ ಅಹಮಿಕೆ ಕೊಂಚ ಅತಿಯಾಗಿರುವ ಹೆಣ್ಣಾದರೂ ಭವಿಷ್ಯದ ಪ್ರಶ್ನೆ ಬಂದಾಗ ಯುಕ್ತಾಯುಕ್ತ ಪರಿಜ್ಞಾನ ತೋರಿಸುವುದಿಲ್ಲವೇ? ಬೆಳೆದು ಬೇರೆ ಸಂಸಾರ ಕಟ್ಟಿಕೊಂಡ ಮಕ್ಕಳ ಕತೆ ಒತ್ತಟ್ಟಿಗಿರಲಿ, ಹೆಂಡತಿಯಾದವಳು ಈ ಸಂದರ್ಭದಲ್ಲಿ ಪ್ರತಿಕ್ರಿಯಿಸಬಹುದಾದ ರೀತಿ ಹೇಗಿರಬಹುದು? ವಿಚ್ಛೇದನದ ಆದೇಶ ಸಿಗುವವರೆಗೆ ಮದುವೆಗೆ ಒಪ್ಪಿಕೊಳ್ಳುವ ಅಪ್ರಬುದ್ಧೆ ತಾನಲ್ಲ ಎನ್ನುವುದು ಫಲ್ಗುಣನಿಗೆ ಗೊತ್ತಿದೆ. ಅಲ್ಲದೆ ಅದು ಕಾನೂನುಬಾಹಿರ ಎನ್ನುವ ಅರಿವೂ ಅವನಿಗೆ ಇರುತ್ತದೆ.